

ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ

## ಸ್ವಾಭಿಮಾನದ ಕಟ್ಟಡಕ್ಕೆ ಮಾನವೀಯತೆಯ ಇಟ್ಟಿಗೆ

ದಿನಾಂಕ 26 ಮೇ 2012ರ ಹೊತ್ತಿಗೆ ಮೋರೇಶ್ವರದ ಪರ್ವತಗಳ ಮಡಿಲಲ್ಲಿ ಒಂದು ಸುಂದರ ಕಟ್ಟಡ ಸಿದ್ಧವಾಗಿತ್ತು. ಭಾವೇಶ್ ಆಗಲೀ, ಭಾವಸಾ ಆಗಲೀ ಯಾವುದೇ ಪ್ರಕಾರದ ಆಚರಣೆಗಳಲ್ಲಿ ವಿಶ್ವಾಸ ಇರಿಸಿರಲಿಲ್ಲ. ಹಾಗಾಗೀ ಯಾವುದೇ ಪೂಜಾಪಾಠ, ಇಲ್ಲ ಹವನವನ್ನು ಇಟ್ಟುಕೊಳ್ಳಲಿಲ್ಲ. ಬೆಳಗ್ಗೆ ಓಶೋ ಧ್ಯಾನದ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡರು. ಪ್ರಸನ್ನ ವಾತಾವರಣ, ಧ್ಯಾನಕ್ಕೆ ಪ್ರಶಸ್ತವಾಗಿತ್ತು. ಧ್ಯಾನದ ನಂತರ ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಭಾವಸಾ ಅವರ ಪೂರಾ ಪರಿವಾರ, ಕೃಷ್ಣಕಾಂತ್ ಭಾಯಿ, ಅನುರಾಧಾ ಬೆನ್, ದಿಲೀಪ್, ಆವಲೆ ಮತ್ತು ಕೆಲವು ಗ್ರಾಮವಾಸಿಗಳು, ಹಲವು ಶುಭಚಿಂತಕರು ಭಾವೇಶ್ ಮತ್ತು ಅವರ ಅಂಧ ತಂಡವನ್ನು ಆಶೀರ್ವದಿಸಲು ಉಪಸ್ಥಿತರಿದ್ದರು. ಆ ದಿನ ಸನ್‌ರೈಸ್ ಕ್ಯಾಂಡಲ್ಸ್‌ನ ಹೊಸ ಸೂರ್ಯೋದಯವಾಗಿತ್ತು. ಐದು ಕೊಠಡಿಗಳು, ದೊಡ್ಡದಾದ ಹಾಲ್, ಹಿಂದುಗಡೆ ಮ್ಯಾನುಫ್ಯಾಕ್ಚರಿಂಗ್‌ಗಾಗಿ ದೊಡ್ಡ ಶೆಡ್ ತಯಾರಾಗಿ ನಿಂತಿತ್ತು. ಆ ಸಮಯಕ್ಕೆ ಇಷ್ಟು ಜಾಗ ಅವರಿಗೆ ಸಾಕಾಗುವಂತಿತ್ತು.

ಭಾವೇಶ್ ಮತ್ತು ನೀತಾ ಅವರಿಗೆ ಒಂದು ಕೋಣೆ ಸಿಕ್ಕಿತ್ತು. ಸುಂದರವಾದ ಅಡುಗೆಮನೆ. ಅಂಧ ಮಿತ್ರರಿಗೂ ಇಳಿದುಕೊಳ್ಳಲು ಒಳ್ಳೆಯ ವ್ಯವಸ್ಥೆ ಸಿದ್ಧವಾಗಿತ್ತು. ಸಿಂದೋಡಾದಲ್ಲಿಯ ಪೀಠೋಪಕರಣಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಭಾವೇಶ್ ಆಗಲೇ ಮುಂದಿನದನ್ನು ಯೋಚಿಸುತ್ತಿದ್ದರು. ಮಹಾಬಲೇಶ್ವರಕ್ಕೆ ಬರುವ ಪ್ರವಾಸಿಗಳನ್ನು ಇಲ್ಲಿಗೆ ಕರೆತರುವಲ್ಲಿ ಸಫಲರಾದರೆ, ಸಾಕಷ್ಟು ವ್ಯಾಪಾರವನ್ನು ಹೆಚ್ಚಿಸಲು ಸಾಧ್ಯವಿದೆ. ಅದಲ್ಲದೆ, ಅಂಧ ತಂಡ ಮೋಂಬತ್ತಿಗಳನ್ನು ಹೇಗೆ ತಯಾರು ಮಾಡುತ್ತದೆ ಎಂಬುದನ್ನೂ ಪ್ರವಾಸಿಗರು ನೋಡಬಹುದು. ಈಗ ಹೊಸದೊಂದು ಪ್ರಾಜೆಕ್ಟ್ ಯೋಚಿಸಿದರು.

ಸನ್‌ರೈಸ್ ಕ್ಯಾಂಡಲ್ಸ್‌ನ ಈ ಹೊಸ ಪ್ರಾಜೆಕ್ಟ್‌ಗೆ 'ವ್ಯಾಕ್ಸ್ ಮ್ಯೂಸಿಯಂ' ಹೆಸರನ್ನು ಕೊಟ್ಟರು. ಮಹಾಬಲೇಶ್ವರದಿಂದ ತಮ್ಮ ಮೋರೇಶ್ವರಕ್ಕೆ ಹಾದ ಹತ್ತು ಕಿಲೋಮೀಟರ್ ಹಾದಿಯುದ್ದಕ್ಕೂ, 'ಸನ್‌ರೈಸ್ ಕ್ಯಾಂಡಲ್ಸ್ ವ್ಯಾಕ್ಸ್ ಮ್ಯೂಸಿಯಂ' ಹೆಸರಿನ ಸೂಚಕ ಫಲಕಗಳನ್ನು ಉದ್ದಕ್ಕೂ ಹಾಕಿಸಿದರು. ಈ ವ್ಯಾಕ್ಸ್ ಮ್ಯೂಸಿಯಂನಲ್ಲಿ ತಮ್ಮ ತಂಡ ತಯಾರಿಸುವ ವಿವಿಧ ಬಗೆಯ ಕ್ಯಾಂಡಲ್ಸ್‌ಗಳನ್ನು ಪ್ರವಾಸಿಗರು ನೋಡಲು ಆಕರ್ಷಕವಾಗಿ ಪ್ರದರ್ಶಿಸಿದ್ದರು. ಮ್ಯೂಸಿಯಂಗೆ ಯಾವ ಪ್ರವೇಶಧನವನ್ನೂ ಇಡಲಿಲ್ಲ. ಪ್ರದರ್ಶನ ಮತ್ತು ಮಾರಾಟ ಎರಡರ ವ್ಯವಸ್ಥೆಯನ್ನೂ ಮಾಡಿದರು. ಇಲ್ಲಿ ಫಲಕಗಳನ್ನು ನಿಲ್ಲಿಸುವುದಲ್ಲದೆ, ಒಂದು ಮೋಂಬತ್ತಿಗಳ ಕ್ಯಾಟಲಾಗ್ ರಚಿಸಿದರು. ಮಹಾಬಲೇಶ್ವರದ ಇವರ ಸ್ಟಾಲ್ ಇದ್ದ ಹೊಟೆಲ್ ಮತ್ತು ರೆಸಾರ್ಟ್‌ಗಳಿಗೆ ಬರುವ ಪ್ರವಾಸಿಗರಿಗೆ ವ್ಯಾಕ್ಸ್ ಮ್ಯೂಸಿಯಂ ಬಗ್ಗೆ ತಿಳಿಸಿ ಅಲ್ಲಿಗೆ ಹೋಗಲು ಸೂಚಿಸುತ್ತಿದ್ದರು. ಹೀಗಾಗಿ ಪ್ರವಾಸಿಗರು ಮೋರೇಶ್ವರಕ್ಕೆ ಬರತೊಡಗಿದರು, ಇಲ್ಲಿ ಅಂಧ ತಂಡದ ಶ್ರಮ ಮತ್ತು ಕೆಲಸವನ್ನು ನೇರವಾಗಿ ನೋಡುತ್ತಿದ್ದರು. ಇದು ಅವರಿಗೂ ಸಕಾರಾತ್ಮಕ ಅನುಭವವಾಗುತ್ತಿತ್ತು. ಅಲ್ಲಿಯವರೆಗಾಗಲೇ 3000ದಷ್ಟು ಮೋಂಬತ್ತಿ ವಿನ್ಯಾಸಗಳನ್ನು ಮಾಡಿ ಅಷ್ಟೂ ಮಾದರಿಗಳನ್ನು ಅಲ್ಲಿ ಪ್ರದರ್ಶಿಸಿದ್ದರು. ಇದೇ ಹಾದಿ ಮುಂದುವರೆದು ಕಾಸ್ ಪಠಾರ್ ಮತ್ತು ಫ್ಲವರ್ ವ್ಯಾಲೀ ಮೂಲಕ ಹೋಗುತ್ತಾ ಸತಾರಾ ಪಟ್ಟಣವನ್ನು ತಲುಪುತ್ತಿತ್ತು. ಚರಿತ್ರೆಯಲ್ಲಿ ಈ ರಸ್ತೆಯನ್ನು ಛತ್ರಪತಿ ಶಿವಾಜಿ ಮಹಾರಾಜ್ ಉಪಯೋಗಿಸುತ್ತಿದ್ದರು ಎಂಬ ಉಲ್ಲೇಖವಿದೆ. ಅದೇ ಕಾರಣಕ್ಕೆ ಈ ಪೂರ್ಣ ರಸ್ತೆಯನ್ನು ರಾಜ್ಮಾರ್ಗ್ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಕಾಸ್ ಪಠಾರ, ಯುನೆಸ್ಕೋ ಮಾನ್ಯತೆ ಪಡೆದ ವಿಶ್ವ ವಿರಾಸತ್ ಸ್ಥಳವಾಗಿದೆ. ಮಳೆ ಸುರಿದ ನಂತರ ಅಲ್ಲಿಯ ಎಲ್ಲ ಪರ್ವತಗಳು ಹೂವಿನಿಂದ ಅರಳಿ ನಿಲ್ಲುತ್ತವೆ. ಇಡೀ ಪರ್ವತಕ್ಕೆ ವಿವಿಧ ಬಣ್ಣಗಳ ದುಪ್ಪಟ್ಟಾ